## 2018 ಕ.ತೀ.ವ 633

### (ಕಲಬುರ್ಗಿ ಪೀಠ)

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇಗೌಡ

### ಮೆ. ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿ., –ವಿರುದ್ಧ– ಸಣ್ಣ ತಾಯಣ್ಣ ಮತ್ತು ಇತರರು*

**ಕಾರ್ಮಿಕ ನಷ್ಟ ಪರಿಹಾರ ಕಾಯಿದೆ, 1973, ಸೆಕ್ಷನ್ 30(1)**

**ಪ್ರಸ್ತುತ ಪ್ರಕರಣದಲ್ಲಿ ಅಪಘಾತ ಸಂಭವಿಸಿದ ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳ ಮಾಲೀಕರು ಬೇರೆ ಬೇರೆ ಇರುವ ಸಂದರ್ಭದಲ್ಲಿ ಮತ್ತು ಬೇರೆ ಬೇರೆ ವಿಮಾ ಕಂಪನಿಗಳ ಅಡಿ ಇರುವ ಸಂದರ್ಭದಲ್ಲಿ ಇಬ್ಬರು ಮಾಲೀಕರು ಮತ್ತು ಎರಡೂ ವಿಮಾ ಕಂಪನಿಗಳು ಜಂಟಿಯಾಗಿ ಪರಿಹಾರ ನೀಡಲು ಭಾಧ್ಯಸ್ಥರಿರುತ್ತಾರೆ.**

**ಅಲ್ಲದೇ ಪ್ರಸ್ತುತ ಪ್ರಕರಣದಲ್ಲಿ ಟ್ರೇಲರ್‌ನಲ್ಲಿ ಪ್ರಯಾಣಿಸುತ್ತಿರುವ ಕಾರ್ಮಿಕನು ಟ್ರ್ಯಾಕ್ಟರ್ ಮಾಲೀಕನೊಂದಿಗೆ ನೌಕರ–ಮಾಲೀಕ ಸಂಬಂಧ ಹೊಂದಿದ್ದಾನೆಂದು ಪರಿಗಣಿಸಬೇಕಾಗುತ್ತದೆ. ಅಲ್ಲದೇ ಟ್ರೇಲರ್‌ನ್ನು ಟ್ರ್ಯಾಕ್ಟರ್‌ನೊಂದಿಗೆ ಉಪಯೋಗಿಸಲು ಮಾಲೀಕನ ಸಮ್ಮತಿ ಇರುವುದರಿಂದ ಇಬ್ಬರೂ ಮಾಲೀಕರನ್ನು ಸಮಾನ ಭಾದ್ಯಸ್ಥರೆಂದು ಪರಿಗಣಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** | ***ಪ್ಯಾರಾದಲ್ಲಿ***

*1. ಐಎಲ್‌ಆರ್ 2008 ಕೆಎಆರ್ 64*
*ಬ್ರಾಂಚ್ ಮ್ಯಾನೇಜರ್, ನ್ಯೂ ಇಂಡಿಯಾ ಅಶುರೆನ್ಸ್ ಕಂ. ಲಿಮಿಟೆಡ್ –ವಿರುದ್ಧ– ಬೋರೇಗೌಡ ಮತ್ತು ಇತರರು* *(ಉಲ್ಲೇ) 3*

*ಎಮ್.ಎಫ್.ಎ. ಸಂಖ್ಯೆ: 2152/2006 (ಡಬ್ಲ್ಯೂಸಿ), ದಿನಾಂಕ 1ನೇ ಸೆಪ್ಟೆಂಬರ್, 2015.

ಅರ್ಜಿದಾರರ ಪರ: ಶ್ರೀ ಮನ್‌ವೇಂದ್ರ ರೆಡ್ಡಿ, ವಕೀಲರು;
3ನೇ ಪ್ರತ್ಯರ್ಜಿದಾರರ ಪರ: ಶ್ರೀ ಪಿ.ಎಸ್. ಮಳಿಪಾಟೀಲ್, ವಕೀಲರು;
4ನೇ ಪ್ರತ್ಯರ್ಜಿದಾರರ (ಎ–ಸಿ) ಪರ: ಶ್ರೀ ಬಸವರಾಜ್ ಆರ್. ಮಠ್, ವಕೀಲರು;
5ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಸಂಗೀತ ಭದ್ರಶೆಟ್ಟಿ, ವಕೀಲರು;
1ನೇ ಮತ್ತು 2ನೇ ಪ್ರತ್ಯರ್ಜಿದಾರರಿಗೆ ನೋಟೀಸು ಜಾರಿಮಾಡಲಾಗಿದೆ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇ ಗೌಡ:**

ಕಾರ್ಮಿಕರ ನಷ್ಟಪರಿಹಾರ–ಆಯುಕ್ತರು, ರಾಯಚೂರು (ಇಲ್ಲಿ ಇನ್ನುಮುಂದೆ ಸಂಕ್ಷಿಪ್ತತೆಗಾಗಿ 'ಆಯುಕ್ತರು' ಎಂದು ಉಲ್ಲೇಖಿಸಲಾಗಿದೆ) ಇವರು ಹೊಣೆಗಾರಿಕೆಯ ಆಧಾರದ ಮೇಲೆ ಹೊರಡಿಸಿದ ತೀರ್ಪು ಮತ್ತು ಐತೀರ್ಪನು ಪ್ರಶ್ನಿಸಿ ಟ್ರ್ಯಾಕ್ಟರ್‌ನ ವಿಮಾಗಾರನು ಈ ಅಪೀಲನ್ನು ಹೂಡಿರುತ್ತಾನೆ.

2. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ಅಹವಾಲನ್ನು ಆಲಿಸಿದ ನಂತರ ಮತ್ತು ಆಯುಕ್ತರು ಹೊರಡಿಸಿದ ತೀರ್ಪು ಮತ್ತು ಐತೀರ್ಪನ್ನು ಅವಗಾಹಿಸಿದ ತರುವಾಯ ಈ ಅಪೀಲಿನಲ್ಲಿ ಪರಿಗಣನೆಗಾಗಿ ಉದ್ಭವಿಸಿರುವ ಕಾನೂನಿನ ಗಣನೀಯ ಪ್ರಶ್ನೆಗಳು ಹೀಗಿವೆ:

*i. ಟ್ರ್ಯಾಕ್ಟರ್‌ನ ವಿಮಾಗಾರನ ಮೇಲೆ ಹೊಣೆಗಾರಿಕೆಯುನ್ನು ಹೊರಿಸಿರುವುದಕ್ಕೆ ಸಂಬಂಧಿಸಿದಂಥ ಆಯುಕ್ತರ ನಿರ್ಣಯವನ್ನು ಕಾನೂನಿನಲ್ಲಿ ಸಮರ್ಥಿಸಲಾಗಿದೆಯೇ?*

*ii. ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳೆರಡರ ಮಾಲೀಕರು ಮತ್ತು ವಿಮಾಗಾರರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರರಾಗಿದ್ದಾರೆಯೇ?*

*iii. ಕಾರ್ಮಿಕರ ನಷ್ಟಪರಿಹಾರ ಆಯುಕ್ತರು ನೀಡಿದ ನಷ್ಟಪರಿಹಾರ ಮತ್ತು ಬಡ್ಡಿಯು ಕೆಲಸಗಾರರ ನಷ್ಟಪರಿಹಾರ ಅಧಿನಿಯಮ, 1923ರ ಉಪಬಂಧಗಳಿಗೆ ಅನುಸಾರವಾಗಿದೆಯೇ?*

*iv. ಆದೇಶ ಅಥವಾ ಐತೀರ್ಪು ಏನು?*

3. ಟ್ರ್ಯಾಕ್ಟರ್‌ನ ವಿಮಾಗಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಮನ್‌ವೇಂದ್ರ ರೆಡ್ಡಿಯವರು, ಮೃತ–ಉರ್ಕುಂದಮ್ಮನು ಟ್ರೇಲರ್‌ನಲ್ಲಿ ಪ್ರಯಾಣಿಸುತ್ತಿದ್ದು, ಅವಳ ಹೊಣೆಗಾರಿಕೆಯು ಟ್ರ್ಯಾಕ್ಟರ್‌ನ ವಿಮಾ ಪಾಲಿಸಿಯ ಅಡಿಯಲ್ಲಿ ಒಳಗೊಳ್ಳುವುದಿಲ್ಲವೆಂದು, ಆದುದರಿಂದ, ಟ್ರ್ಯಾಕ್ಟರ್‌ನ ವಿಮಾಗಾರನು, ಟ್ರ್ಯಾಕ್ಟರ್‌ನ ಮಾಲೀಕನ ನಷ್ಟಭರ್ತಿಗೆ ಹೊಣೆಗಾರನಾಗುವುದಿಲ್ಲವೆಂದು ನಿವೇದಿಸಿದ್ದಾರೆ. ಆಯುಕ್ತರು ಇದನ್ನು ಪರಿಗಣಿಸದೆ, ಟ್ರ್ಯಾಕ್ಟರ್‌ನ ವಿಮಾಗಾರನ ಮೇಲೆ ಹೊಣೆಗಾರಿಕೆಯನ್ನು ಹೊರಿಸುವಲ್ಲಿ ತಪ್ಪೆಸಗಿದೆಯೆಂದು ನಿವೇದಿಸಿದ್ದಾರೆ. ಸದರಿ ವಾದಕ್ಕೆ ಬಾಧಕವಾಗದಂತೆ ಮತ್ತು ವರದಿಯಾದ ***ದ ಬ್ರಾಂಚ್ ಮ್ಯಾನೇಜರ್, ನ್ಯೂ ಇಂಡಿಯಾ ಅಶುರೆನ್ಸ್ ಕಂ. ಲಿಮಿಟೆಡ್ -ವಿರುದ್ಧ- ಬೋರೇಗೌಡ ಮತ್ತು ಇತರರು***[1], ಪ್ರಕರಣದಲ್ಲಿ ವಿಭಾಗೀಯ ಪೀಠದ ತೀರ್ಪನ್ನು ಆಧರಿಸಿ, ಅವರು ಹೊಣೆಗಾರಿಕೆಯನ್ನು ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳ ವಿಮಾಗಾರರಿಬ್ಬರ ಮೇಲೂ ಸಮಾನವಾಗಿ ಹೊರಿಸಬೇಕಾಗುತ್ತದೆಯೆಂದು ನಿವೇದಿಸಿದ್ದಾರೆ. ಆದುದರಿಂದ, ಹೊಣೆಗಾರಿಕೆಗೆ ಸಂಬಂಧಿಸಿದಂಥ ಆಯುಕ್ತರ ತೀರ್ಪು ಮತ್ತು ಐತೀರ್ಪನ್ನು ಮಾರ್ಪಾಡುಗೊಳಿಸುವ ಮೂಲಕ ಅಪೀಲನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿದ್ದಾರೆ.

4. ಟ್ರೇಲರ್‌ನ ವಿಮಾಗಾರನ ಪರವಾಗಿ ಹಾಜರಾಗಿರುವ ಶ್ರೀಮತಿ ಸಂಗೀತ ಭದ್ರಶೆಟ್ಟಿಯವರು, ಪೊಲೀಸರಿಗೆ ನೀಡಿದ ದೂರಿನ ಅಂಶಗಳ ಪ್ರಕಾರ ಮೃತ–

1. ಐಎಲ್‌ಆರ್ 2008 ಕರ್ನಾಟಕ 64

ಉರ್ಕುಂದಮ್ಮನು, ನಿವೃತ್ತ ತಹಸೀಲ್ದಾರ್ ಆದ ರುದ್ರಗೌಡ ಎಂಬೊಬ್ಬರ ಬಳಿ ನೌಕರರಾಗಿದ್ದರು ಹಾಗೆಯೇ, ಟ್ರ್ಯಾಕ್ಟರ್‌ನ ಮಾಲೀಕ ಎಂದರೆ ಸೋಮಶೇಖರ್ ಗೌಡ ಮತ್ತು ಮೃತ–ಉರ್ಕುಂದಮ್ಮನ ನಡುವೆಯಾಗಲಿ ಅಥವಾ ಟ್ರೇಲರ್‌ನ ಮಾಲೀಕ ಎಂದರೆ ಬಸಣ್ಣಗೌಡ ಮತ್ತು ಮೃತರ ನಡುವೆಯಾಗಲಿ, ನೌಕರ ಮತ್ತು ನೌಕರಿದಾತನಿಗೆ ಯಾವುದೇ ಸಂಬಂಧವಿಲ್ಲ. ಮೃತಳು, ಟ್ರೇಲರ್‌ನಲ್ಲಿ ಅನಧಿಕೃತ ಪ್ರಯಾಣಿಕಳಾಗಿ ಪ್ರಯಾಣಿಸುತ್ತಿದ್ದು, ಅವಳ ಹೊಣೆಗಾರಿಕೆ ಟ್ರೇಲರ್‌ನ ವಿಮಾಪಾಲಿಸಿಯ ಅಡಿಯಲ್ಲಿ ಒಳಗೊಳ್ಳುವುದಿಲ್ಲವೆಂದು ನಿವೇದಿಸಿದ್ದಾರೆ. ಆಯುಕ್ತರು ಇದನ್ನು ಪರಿಗಣಿಸಿ, ಟ್ರೇಲರ್‌ನ ವಿಮಾಗಾರನ ಮೇಲೆ ಹೊಣೆಗಾರಿಕೆಯನ್ನು ಹೊರಿಸುವುದನ್ನು ಸಮರ್ಥಿಸಿಕೊಂಡಿದ್ದರು. ಟ್ರೇಲರ್‌ನ ಮಾಲೀಕ ಎಂದರೆ, ಬಸಣ್ಣಗೌಡನು ಏಕ/ಸಾಮಾನ್ಯ ವಿಮಾ ಪಾಲಿಸಿ ಅಡಿಯಲ್ಲಿ ತಾನು ಹೊಂದಿದ್ದ ಟ್ರ್ಯಾಕ್ಟರ್‌ನೊಟ್ಟಿಗೆ ಅವನ ಟ್ರೇಲರಿಗೆ ವಿಮಾಗಾರನಾಗಿದ್ದು, ಯಾರೋ ಒಬ್ಬ ಎಂದರೆ ಸೋಮಶೇಖರ್ ಗೌಡನ ಟ್ರ್ಯಾಕ್ಟರ್‌ನೊಂದಿಗೆ ಓಡಿಸಲು ಅವನ ಟ್ರೇಲರ್‌ಗೆ ಅವಕಾಶ ನೀಡಲು ಸಾಧ್ಯವಿರಲಿಲ್ಲ ಮತ್ತು ಹಾಗೆ ಮಾಡಿರುವುದರಿಂದ, ಟ್ರೇಲರ್‌ನ ವಿಮಾಗಾರನು ಅವನಿಗೆ ನಷ್ಟಭರ್ತಿಯನ್ನು ತುಂಬಿಕೊಡಲು ಮತ್ತು ವಿಮಾಪಾಲಿಸಿಯಾಗಿ ಕ್ಲೇಮುದಾರರಿಗೆ ನಷ್ಟಪರಿಹಾರವನ್ನು ತುಂಬಿಕೊಡಲು ಜವಾಬ್ದಾರನಾಗಿರುವುದಿಲ್ಲ. ಅಷ್ಟೇ ಅಲ್ಲದೆ, ಅವಳು, ಮೃತರು, ತನ್ನ ಟ್ರ್ಯಾಕ್ಟರ್‌ಗೆ ಸಂಬಂಧಿಸಿದ ಕಾರ್ಯನಿರ್ವಹಿಸಲು ನಿರತರಾಗಿದ್ದ ತನ್ನ ನೌಕರರೆಂದು ಸೋಮಶೇಖರ್ ಗೌಡ ಹೇಳಿರುವನೆಂದು ಹಾಗೆಯೇ, ಮೃತರು ಮತ್ತು ಟ್ರೇಲರ್‌ನ ಮಾಲೀಕರ ನಡುವೆ ಕೆಲಸಗಾರ ಮತ್ತು ಕೆಲಸದಾತರ ಸಂಬಂಧವಿಲ್ಲವೆಂದು ನಿವೇದಿಸಿದ್ದಾರೆ. ಆ ಆಧಾರದ ಮೇಲೆಯೂ ಕೂಡ ಟ್ರೇಲರ್‌ನ ವಿಮಾಗಾರನ ಮೇಲೆ ಹೊಣೆಗಾರಿಕೆಯನ್ನು ವಿಧಿಸಲಾಗುವುದಿಲ್ಲವೆಂದು ನಿವೇದಿಸಿದ್ದಾರೆ. ಆದುದರಿಂದ ಈ ಅಪೀಲನ್ನು ವಜಾಗೊಳಿಸಬೇಕೆಂದು ಅವಳು ಕೋರಿಕೊಂಡಿದ್ದಾಳೆ.

5. ಬಸಣ್ಣಗೌಡ – ಟ್ರೇಲರ್‌ನ ಮಾಲೀಕನ ಕಾನೂನು ಪ್ರತಿನಿಧಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಬಸವರಾಜ್ ಆರ್. ಮಠ್‌ರವರು ಏಕ ವಿಮಾಪಾಲಿಸಿಯ ಅಡಿಯಲ್ಲಿ ಬಸಣ್ಣಗೌಡರಿಗೆ ಸೇರಿದ ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗೆ

ವಿಮೆ ಮಾಡಿಸಿದ್ದು, ಆನಂತರ, ಯಾರೋ ಒಬ್ಬ ವ್ಯಕ್ತಿಗೆ ಸೇರಿದ ಟ್ರ್ಯಾಕ್ಟರ್‌ನೊಂದಿಗೆ ಟ್ರೇಲರನ್ನು ನಡೆಸಲು ಅವಕಾಶ ನೀಡಿರುವುದು ಮೋಟಾರು ವಾಹನಗಳ ಅಧಿನಿಯಮದ 149ನೇ ಪ್ರಕರಣದ ಮೇರೆಗಿನ ವಿಮಾಪಾಲಿಸಿಯ ನಿಬಂಧನೆಗಳನ್ನು ಉಲ್ಲಂಘಿಸಲು ಕಾರಣವಾಗುವುದಿಲ್ಲವೆಂದು ಇದು ಟ್ರೇಲರ್‌ನ ವಿಮಾಗಾರನನ್ನು ಹೊಣೆಗಾರಿಕೆಯಿಂದ ವಿಮೋಚನೆಗೊಳಿಸಿದೆಯೆಂದು ನಿವೇದಿಸಿದ್ದಾರೆ. ಅವನ ಪ್ರಕಾರ, ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ, ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳೆರಡರ ವಿಮಾಗಾರರು ಆಯುಕ್ತರು ನೀಡಿದ ನಷ್ಟಪರಿಹಾರವನ್ನು ಸಂದಾಯ ಮಾಡಲು ಸಮಾನವಾಗಿ ಹೊಣೆಗಾರರಾಗಿರುತ್ತಾರೆ.

6. ಟ್ರ್ಯಾಕ್ಟರ್‌ನ ಮಾಲೀಕರಾದ ಎಂದರೆ ಸೋಮಶೇಖರ್ ಗೌಡ ಇವರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ವೀರಣ್ಣಗೌಡ ಇವರು, ಹೊಣೆಗಾರಿಕೆಯನ್ನು ಟ್ರ್ಯಾಕ್ಟರ್ ಮತ್ತು ಟ್ರೇಲರ್ ಎರಡರ ವಿಮಾಗಾರರಿಬ್ಬರ ಮೇಲೆ ಸಮಾನವಾಗಿ ಹೊಣೆಗಾರಿಕೆಯನ್ನು ಹೊರಿಸಬೇಕೆಂಬುದು ಟ್ರೇಲರ್‌ನ ಮಾಲೀಕನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸಲ್ಲಿಸಿದ ವಾದಗಳನ್ನು ಬೆಂಬಲಿಸಿದ್ದಾರೆ.

7. ಮೃತ–ಉರ್ಕುಂದಮ್ಮನು, ಟ್ರ್ಯಾಕ್ಟರ್‌ನ ಮಾಲೀಕನ ಎಂದರೆ ಸೋಮಶೇಖರ್ ಗೌಡ ಬಿನ್ ರುದ್ರಗೌಡರ ಅಧೀನದಲ್ಲಿರುವ ಕೆಲಸಗಾರಳಾಗಿದ್ದಳೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಟ್ರ್ಯಾಕ್ಟರ್‌ನ ಮಾಲೀಕನ ಅಧೀನದಲ್ಲಿ ಕೆಲಸಗಾರಳಾಗಿ ಬಸಣ್ಣಗೌಡನಿಗೆ ಸೇರಿದ ಟ್ರೇಲರ್‌ನಲ್ಲಿ ಪ್ರಯಾಣಿಸುತ್ತಿದ್ದಾಗ, ಟ್ರ್ಯಾಕ್ಟರ್ ಹಾಗೂ ಟ್ರೇಲರು ಅಪಘಾತಕ್ಕೊಳಗಾಗಿ ಗಾಯಗಳಿಗೆ ತುತ್ತಾಗಿದ್ದಾಳೆ ಎಂಬುದರಲ್ಲಿ ಕೂಡ ಯಾವುದೇ ವಿವಾದವಿಲ್ಲ. ಮೃತರ ತಂದೆಯು ಪೊಲೀಸರಿಗೆ ನೀಡಿದ ದೂರಿನಲ್ಲಿ, ರುದ್ರಗೌಡನ ಜಮೀನಿನಲ್ಲಿ ಕೂಲಿ ಮಾಡಲು ರುದ್ರೇಗೌಡರ ಟ್ರ್ಯಾಕ್ಟರ್‌ನಲ್ಲಿ ಇತರರೊಟ್ಟಿಗೆ ಮೃತರು ಪ್ರಯಾಣಿಸುತ್ತಿದ್ದಾಗ, ಅಪಘಾತವು ನಡೆದಿದ್ದು, ಅವಳಿಗೆ ಗಾಯಗಳಾಗಿವೆ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ದೂರಿನಲ್ಲಿ ಉಲ್ಲೇಖಿಸಲಾದ ರುದ್ರಗೌಡನು, ಟ್ರ್ಯಾಕ್ಟರ್‌ನ ಮಾಲೀಕನಾಗಿರುವ ಸೋಮಶೇಖರ್‌ನ ತಂದೆಯಲ್ಲದೆ ಮತ್ತಾರು

ಅಲ್ಲ. ಪ್ರಶ್ನಿತ ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗೆ ಅಪಘಾತವಾದ ಸಮಯದಲ್ಲಿ, ಕೃಷಿ ಚಟುವಟಿಕೆಗಳನ್ನು ನಡೆಸಲು ಒಟ್ಟಿಗೆ ನಿರತರಾಗಿದ್ದರು ಎಂಬುದರಲ್ಲಿ ಪಕ್ಷಕಾರರ ನಡುವೆ ಯಾವುದೇ ವಿವಾದವಿಲ್ಲ. ಟ್ರ್ಯಾಕ್ಟರು, ಅಪೀಲುದಾರ–ಯುನೈಟೆಡ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್‌ನ ವಿಮಾಗಾರನಾಗಿದ್ದು, ಟ್ರೇಲರು, ಎದುರುದಾರ ಸಂ.5ರ ವಿಮಾಗಾರನಾಗಿತ್ತು. ಟ್ರ್ಯಾಕ್ಟರ್‌ನ ಅಪೀಲುದಾರ–ವಿಮಾಗಾರನ ಪರವಾಗಿ ಹಾಜರಾದ ಮಾನ್ಯ ವಕೀಲರಿಗೆ ಅದರ ಪ್ರತಿಯನ್ನು ಹೊರಡಿಸಿದ ನಂತರ ಮೆಮೊದೊಂದಿಗೆ ಟ್ರೇಲರ್‌ನ ಮಾಲೀಕನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಒದಗಿಸಿದ ವಿಮಾಪಾಲಿಸಿ ಪ್ರಕಾರ ಅಪಘಾತವಾದ ದಿನಾಂಕದಂದು ವಿಮಾಪಾಲಿಸಿಯು ಜಾರಿಯಲ್ಲಿತ್ತು ಮತ್ತು ಇದನ್ನು ಟ್ರೇಲರ್‌ನ ವಿಮಾಗಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಒಪ್ಪಿಕೊಂಡಿದ್ದಾರೆ.

8. ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳ ಬೇರೆ ಬೇರೆ ಮಾಲೀಕರು ಎಂದರೆ, ಅನುಕ್ರಮವಾಗಿ ಸೋಮಶೇಖರಗೌಡ ಮತ್ತು ಬಸಣ್ಣಗೌಡರಿಗೆ ಸೇರಿವೆ ಮತ್ತು ಅವರು ಪ್ರತ್ಯೇಕ ನೋಂದಣಿ ಸಂಖ್ಯೆಗಳನ್ನು ಹೊಂದಿದ್ದರೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಬಸಣ್ಣಗೌಡರಿಗೆ ಸೇರಿದ ಟ್ರೇಲರ್‌ನ ವಿಮಾ ಕಂಪನಿಯ ಅವಗಾಹನೆಯು, ಬಸಣ್ಣಗೌಡರಿಗೆ ಸೇರಿದ ಟ್ರಾಕ್ಟರ್ ಮತ್ತು ಟ್ರೇಲರ್‌ಗಳಿಗೆ ಏಕ ವಿಮಾಪಾಲಿಸಿಯ ಅಡಿಯಲ್ಲಿ ವಿಮೆ ನೀಡಲಾಗಿದೆ ಯೆಂಬುದನ್ನು ತೋರಿಸುತ್ತದೆ. ವಿಮಾ ಪಾಲಿಸಿಯ ಅಡಿಯಲ್ಲಿ ಒಂದು ವಿಮೆ ಮಾಡಿರುವುದನ್ನು ಹೊರತುಪಡಿಸಿದರೆ, ಯಾವುದೇ ಇತರ ಟ್ರ್ಯಾಕ್ಟರ್‌ನೊಂದಿಗೆ ಚಟುವಟಿಕೆಗಳನ್ನು ನಿರ್ವಹಿಸುವುದದಕ್ಕೆ ಬಳಸಲು ತನ್ನ ಟ್ರೇಲರ್‌ನ್ನು ಬಸಣ್ಣಗೌಡನು ಅನುಮತಿ ನೀಡಬಾರದೆಂದು ವಿಮಾಪಾಲಿಸಿಯಲ್ಲಿ ಯಾವುದೇ ಷರತ್ತನ್ನು ವಿಧಿಸಿಲ್ಲ. ಸದೃಶವಾಗಿ, ಟ್ರೇಲರ್‌ನೊಂದಿಗೆ ವಿಮೆ ಮಾಡಿಸಲಾಗಿರುವ ಟ್ರ್ಯಾಕ್ಟರಿನೊಂದಿಗೆ ಮಾತ್ರ ಟ್ರೇಲರನ್ನು ಬಳಸಬೇಕೆಂದು ಸದರಿ ಪಾಲಿಸಿಯ ಅಡಿಯಲ್ಲಿ ಯಾವುದೇ ಷರತ್ತನ್ನು ವಿಧಿಸಿರುವುದಿಲ್ಲ.

9. ಪಕ್ಷಕಾರರ ನಡುವಿನ ವೈರುದ್ಯಗಳನ್ನು ನಿರ್ಣಯಿಸುವ ಸಲುವಾಗಿ ಮತ್ತು ಪರಿಗಣನೆಗಾಗಿ ರೂಪಿಸಲಾದ ಅಂಶಗಳಿಗೆ ಉತ್ತರಿಸುವ ಸಲುವಾಗಿ, ಟ್ರ್ಯಾಕ್ಟರ್

ಮತ್ತು ಟ್ರೇಲರ್‌ನ ಪರಿಭಾಷೆಗಳನ್ನು ತಿಳಿಯಲು ಮತ್ತು ಮೋಟಾರು ವಾಹನಗಳ ಅಧಿನಿಯಮ, 1988ರ (ಸಂಕ್ಷಿಪ್ತತೆಗಾಗಿ ಇಲ್ಲಿ ಇನ್ನುಮುಂದೆ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಸಂಬಂಧಪಟ್ಟ ಉಪಬಂಧಗಳಿಗೆ ಸಂಬಂಧಿಸಿದಂತೆ ಅವುಗಳ ಬಳಕೆಯನ್ನು ಅರಿಯುವುದು ಅಗತ್ಯವಾಗಿರುತ್ತದೆ.

10. ಅಧಿನಿಯಮದ 2(44)ನೇ ಪ್ರಕರಣದ ಪ್ರಕಾರ, "ಟ್ರ್ಯಾಕ್ಟರ್" ಎಂದರೆ, ಯಾವುದೇ ಭಾರದ ವಸ್ತುಗಳನ್ನು ಕೊಂಡೊಯ್ಯಲು (ಮುನ್ನೂಕುವಿಕೆಯ ಉದ್ದೇಶಕ್ಕಾಗಿ, ಬಳಸಲಾದ ಉಪಕರಣವನ್ನು ಹೊರತುಪಡಿಸಿ) ಅದನ್ನು ನಿರ್ಮಿಸದಿರುವ; ಆದರೆ ರಸ್ತೆ–ರೋಲರನ್ನು ಹೊರತುಪಡಿಸಿದ ಮೋಟಾರು ವಾಹನ;

ಟ್ರ್ಯಾಕ್ಟರ್‌ನ ಪರಿಭಾಷೆಯ ಓದಿನಿಂದ, ಟ್ರ್ಯಾಕ್ಟರು ಯಾವುದೇ ಭಾರವನ್ನು ಕೊಂಡೊಯ್ಯಲು ನಿರ್ಮಿತವಾಗಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಧಿನಿಯಮದ 2(16)ನೇ ಪ್ರಕರಣದ ಮೇರೆಗೆ ಪರಿಭಾಷಿಸಲಾದಂತೆ ಟ್ರ್ಯಾಕ್ಟರು ಭಾರದ ವಸ್ತುಗಳ ವಾಹನ ರೀತಿಯದ್ದಲ್ಲದಾದರೂ, ಇದನ್ನು, 'ಭಾರಿ ಸರಕುಗಳ ವಾಹನ' ವೆಂದು ಓದಲಾಗಿದೆ, ಎಂದರೆ, ಅದರ ಒಟ್ಟು ವಾಹನದ ಭಾರವನ್ನು ಕೊಂಡೊಯ್ಯುವ ಯಾವುದೇ ವಾಹನ, ಅಥವಾ 12,000 ಕಿಲೋ ಗ್ರಾಂಗಳನ್ನು ಮೀರಿದ ಅದರಲ್ಲಿ ಯಾವುದಾದರೂ ಒಂದರ ಖಾಲಿ ವಾಹನದ ತೂಕ "ಭಾರಿ ಸರಕು ವಾಹನ" ಎಂದರೆ ಯಾವ ವಾಹನದ ಒಟ್ಟು ಭಾರವು ಅಥವಾ ಯಾವ ಟ್ರಾಕ್ಟರಿನ ಅಥವಾ ರೋಡ್ ರೋಲರಿನ ಪೈಕಿ ಯಾವುದೇ ಒಂದು ಖಾಲಿ ತೂಕವು 12,000 ಕಿಲೋ ಗ್ರಾಂಗಳನ್ನು ಮೀರುವುದೋ ಆ ಯಾವುದೇ ಸರಕು ವಾಹನ ಅಥವಾ ಟ್ರಾಕ್ಟರು ಅಥವಾ ರೋಡ್ ರೋಲರ್;"

11. ಅಧಿನಿಯಮದ 2(46)ನೇ ಪ್ರಕರಣದ ಪ್ರಕಾರ, "ಟ್ರೇಲರ್" ಎಂದರೆ, ಮೋಟಾರು ವಾಹನದ ಮೂಲಕ ಎಳೆಯಲ್ಪಡುವ ಅಥವಾ ಎಳೆಯಲು ಉದ್ದೇಶಿಸಿದ ಸೆಮಿ–ಟ್ರೇಲರ್ ಮತ್ತು ಪಕ್ಕದ–ಕಾರನ್ನು ಹೊರತುಪಡಿಸಿದ ಯಾವುದೇ ವಾಹನ; ಟ್ರೇಲರ್‌ನ ಪರಿಭಾಷೆಯ ಓದಿನಿಂದ, ಇದು, ಅದಾಗದೇ ಚಲಿಸುವುದಿಲ್ಲ ಎಂಬುದು

ಮತ್ತು ಮತ್ತೊಂದು ಮೋಟಾರು ವಾಹನದ ಸಹಾಯದೊಂದಿಗೆ ಎಳೆಯ ಬೇಕಾಗುತ್ತದೆಯೆಂಬುದು ಸ್ಪಷ್ಟವಾಗುತ್ತದೆ.

ಟ್ರೇಲರು, 2(28)ನೇ ಪ್ರಕರಣದ ಮೇರೆಗೆ ಪರಿಭಾಷಿಸಲಾದ ಮೋಟಾರು ವಾಹನದ ಪರಿಭಾಷೆಯ ಪ್ರಕಾರ ಮೋಟಾರು ವಾಹನದ ರೀತಿಯಿದ್ದರೂ, ಇದನ್ನು "ಮೋಟಾರು ವಾಹನ" ಅಥವಾ "ವಾಹನ" ಎಂದು ಓದಲಾಗಿದೆ, ಎಂದರೆ,

> "ಮೋಟಾರು ವಾಹನ" ಅಥವಾ "ವಾಹನ" ಎಂದರೆ ಬಾಹ್ಯ ಅಥವಾ ಆಂತರಿಕ ಮೂಲದಿಂದ ಆದರೆ ಚಲನಶಕ್ತಿಯನ್ನು ರವಾನಿಸಿದ ಮತ್ತು ರಸ್ತೆಗಳ ಮೇಲೆ ಬಳಕೆಗಾಗಿ ಅಳವಡಿಸಲಾದ ಯಾಂತ್ರಿಕವಾಗಿ ಚಲಿಸುವ ಯಾವುದೇ ವಾಹನ ಮತ್ತು ಅದು, ಒಡಲನ್ನು ಜೋಡಿಸಿಲ್ಲದ ಒಂದು ಅಡಿಗಟ್ಟನ್ನು ಮತ್ತು ಒಂದು ಹಿಂಬಂಡಿಯನ್ನು ಒಳಗೊಳ್ಳುತ್ತದೆ. ಆದರೆ ಜೋಡಿಸಿದ ಕಂಬಿಗಳ ಮೇಲೆ ಓಡಾಡುವ ವಾಹನವನ್ನು ಅಥವಾ ಒಂದು ಕಾರ್ಖಾನೆಯಲ್ಲಿ ಅಥವಾ ಇನ್ನಾವುದೇ ಆವೃತ ಆವರಣಗಳಲ್ಲಿ ಮಾತ್ರ ಉಪಯೋಗಿಸಲು ಅಳವಡಿಸಲಾದ ವಿಶೇಷ ಪ್ರಕಾರದ ವಾಹನವನ್ನು ಅಥವಾ ಇಪ್ಪತ್ತೈದು ಘನ ಸೆಂಟಿಮೀಟರುಗಳನ್ನು ಮೀರದ ಸಾಮರ್ಥ್ಯದ ಇಂಜಿನ್‌ನ್ನು ಜೋಡಿಸಿದ ನಾಲ್ಕಕ್ಕಿಂತ ಕಡಿಮೆ ಚಕ್ರಗಳನ್ನು ಹೊಂದಿರುವ ವಾಹನವನ್ನು ಒಳಗೊಳ್ಳುವುದಿಲ್ಲ;

12. ಮೇಲಿನ ಚರ್ಚೆಯಿಂದ, ಇದು ಟ್ರ್ಯಾಕ್ಟರ್ ಮತ್ತು ಟ್ರೇಲರ್‌ನ ಸಂಯೋಜನೆ ಆಗಿದ್ದು, ಇದನ್ನು ಅಧಿನಿಯಮದ 2(47)ನೇ ಪ್ರಕರಣದ ಮೇರೆಗೆ ಪರಿಭಾಷಿಸಲಾದಂತೆ ಸಾರಿಗೆ ವಾಹನದ ರೀತಿಯಿರುವ ಸಂಪೂರ್ಣವಾಗಿ ರಚಿತವಾಗಿರುವ ಟ್ರ್ಯಾಕ್ಟರ್ ಮತ್ತು ಟ್ರೇಲರ್‌ನ ಸಂಯೋಜನೆಯಾಗಿರುತ್ತದೆಂಬುದು ಸ್ಪಷ್ಟವಾಗುತ್ತದೆ ಇದನ್ನು

"ಸಾರಿಗೆ ವಾಹನ" ವೆಂದು ಓದಲಾಗಿದ್ದು, ಸಾರ್ವಜನಿಕ ಸೇವಾ ವಾಹನ ಸರಕು ಸಾಗಣೆ, ಶೈಕ್ಷಣಿಕ ಸಂಸ್ಥೆ ಬಸ್ ಅಥವಾ ಖಾಸಗಿ ಸೇವಾ ವಾಹನವಾಗಿರುತ್ತದೆ;

13. ಅಷ್ಟೇ ಅಲ್ಲದೆ, ಟ್ರ್ಯಾಕ್ಟರ್ ಮತ್ತು ಟ್ರೇಲರ್‌ನ ಸಂಯೋಜನೆಯನ್ನು, ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಸಾರಿಗೆ ವಾಹನವಾಗಿ ಬಳಸಬಹುದು ಅಥವಾ ಇದನ್ನು ಅನುಮತಿಯ ಸ್ವರೂಪದ ಮೇಲೆ ಮತ್ತು ವಿಮಾಪಾಲಿಸಿಯನ್ನು ಆಧರಿಸಿದ ಕೃಷಿ ಚಟುವಟಿಕೆಗಳನ್ನು ನಡೆಸಲು ಸಂಕೀರ್ಣ ವಾಹನವಾಗಿ ಬಳಸಬಹುದು.

14. ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳು ಅವುಗಳದೇ ಆದ ಪ್ರತ್ಯೇಕ ಮೋಟಾರು ವಾಹನಗಳಾಗಿದ್ದು, ಅವುಗಳನ್ನು ಪ್ರತ್ಯೇಕವಾಗಿ ನೋಂದಣಿ ಮಾಡಬೇಕಾಗುತ್ತದೆ. ಆದಾಗ್ಯು, ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳೆರಡೂ ಒಂದಕ್ಕೆ ಸೇರಿದ್ದರೆ ಮತ್ತು ಒಬ್ಬನೇ ಮಾಲೀಕನಾಗಿದ್ದರೆ, ಅವನು ಏಕ ಪಾಲಿಸಿಯ ಅಡಿಯಲ್ಲಿ ಅವುಗಳನ್ನು ಒಟ್ಟಿಗೆ ಸೇರಿಸಿ ವಿಮೆ ಮಾಡಿಸಬಹುದು ಅಥವಾ ಎರಡು ಬೇರೆ ಬೇರೆ ವಿಮಾ ಪಾಲಿಸಿಗಳನ್ನು ಅವುಗಳನ್ನು ಪ್ರತ್ಯೇಕವಾಗಿ ಮಾಡಿಸಬಹುದು, ಅದೇ ವಿಮಾ ಕಂಪನಿಯೊಂದಿಗೆ ಅಥವಾ ಬೇರೆ ಬೇರೆ ವಿಮಾ ಕಂಪನಿಗಳೊಂದಿಗೆ ವಿಮೆ ಮಾಡಿಸಬಹುದು. ಆದುದರಿಂದ, ಟ್ರ್ಯಾಕ್ಟರ್ ಮತ್ತು ಟ್ರೇಲರು ಒಬ್ಬನೇ ವ್ಯಕ್ತಿಗೆ ಸೇರಿರಬೇಕು ಮತ್ತು ಅವುಗಳನ್ನು ಕೃಷಿ ಚಟುವಟಿಕೆಗಳಿಗೆ ಬಳಸುವ ಸಲುವಾಗಿ ಒಂದು ಕಾರ್ಯಕ್ಕೆ ಮತ್ತು ಒಬ್ಬನೇ ವ್ಯಕ್ತಿಗೆ ಸೇರಿರಬೇಕೆಂದು ಕಾನೂನು ಉದ್ದೇಶಿಸುವುದಿಲ್ಲ.

15. ಟ್ರ್ಯಾಕ್ಟರು ಮತ್ತು ಟ್ರೇಲರು, ಯಾವುದೇ ಚಟುವಟಿಕೆಗಳನ್ನು ನಿರ್ವಹಿಸಲು ಒಟ್ಟಿಗೆ ಬಳಸುವ ಬೇರೆ ಬೇರೆ ಮಾಲೀಕರಿಗೆ ಸೇರಿದ್ದಾಗ ಹಾಗೆ ಬಳಸುವ ಅವಧಿಯಲ್ಲಿ, ಅಪಘಾತಗಳು ನಡೆದರೆ, ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳೆರಡರ ಮಾಲೀಕರು ಮತ್ತು ವಿಮಾಗಾರರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ, ಉತ್ತರಿಸಲು ಜವಾಬ್ದಾರರಾಗಿರುವರು, ಮೂರನೇ ಪಕ್ಷಕಾರರಾಗಲಿ ಅಥವಾ ಕೆಲಸಗಾರರಾಗಲಿ

ಅಂಥ ಅಪಘಾತಕ್ಕೆ ಕ್ಲೇಮು ಮಾಡಿರಲಿ, ಗಾಯಗಳಾಗಿರುವ ಸಂಬಂಧ ಅಂಥ ಟ್ರ್ಯಾಕ್ಟರ್ ಅಥವಾ ಟ್ರೇಲರ್‌ನ್ನು ಮಾಲೀಕರ ಅಧೀನದಲ್ಲಾಗಲಿ ಅವರು ತಮ್ಮ ಉದ್ಯೋಗ ನಡೆಸುವ ಅವಧಿಯಲ್ಲಿ ಅಥವಾ ಅವರ ಮರಣವಾದ ಸಂದರ್ಭದಲ್ಲಿ ಅಂಥ ಕೆಲಸಗಾರರ ಅವಲಂಬಿತರ ಮೂಲಕ ಅವರು ನಿರ್ವಹಿಸುವರು. ಅಷ್ಟೇ ಅಲ್ಲದೆ, ಬೇರೆ ಬೇರೆ ಮಾಲೀಕರಿಗೆ ಸೇರಿದ ಟ್ರ್ಯಾಕ್ಟರ್ ಮತ್ತು ಟ್ರೇಲರ್‌ನ್ನು ಕೃಷಿ ಚಟುವಟಿಕೆಗಳನ್ನು ನಡೆಸಲು ಒಟ್ಟಿಗೆ ಬಳಸಲು ಅನುಮತಿಸಿದಾಗ ಮತ್ತು ಹಾಗೆ ಬಳಸುವ ಅವಧಿಯಲ್ಲಿ, ಅಪಘಾತ ನಡೆದರೆ, ಇದರ ಪರಿಣಾಮವಾಗಿ ಟ್ರ್ಯಾಕ್ಟರ್‌ನ ಅಥವಾ ಟ್ರೇಲರ್‌ನ ಮಾಲೀಕನ ಅಧೀನದಲ್ಲಿ ನೌಕರನಾಗಿರುವ ಕೆಲಸಗಾರನಿಗೆ ಗಾಯಗಳಾದಲ್ಲಿ ಅಥವಾ ಅವನ ಮರಣ ಸಂಭವಿಸಿದಂಥ ಸಂದರ್ಭದಲ್ಲಿ, ಅಂಥ ಕೆಲಸಗಾರ ಮತ್ತು ಟ್ರ್ಯಾಕ್ಟರ್‌ನ ಮಾಲೀಕನ ನಡುವೆ ಕೆಲಸಗಾರ ಮತ್ತು ಕೆಲಸದಾತನ ಸಂಬಂಧವು ಅವನ ನಡುವಿನ ನೌಕರ ಮತ್ತು ನೌಕರಿದಾತನ ಸಂಬಂಧವಾಗಿರುತ್ತದೆ ಮತ್ತು ಟ್ರೇಲರ್‌ನ ಮಾಲೀಕ ಮತ್ತು ವಿಪರ್ಯಯವಾಗಿ ಮತ್ತು ಅಂಥ ಸಂಕಲ್ಪ ಅರ್ಥವಿವರಣೆಯನ್ನು, ಅಧಿನಿಯಮದ ಧ್ಯೇಯೋದ್ದೇಶ ಮತ್ತು ಉದ್ದೇಶವನ್ನು ತಲುಪುವುದಕ್ಕೆ ಅಳವಡಿಸಿಕೊಳ್ಳಲು ಅಗತ್ಯಪಡಿಸಲಾಗಿದ್ದು, ಅಂಥ ಅರ್ಥವಿವರಣೆಯು ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ 2(ಇ) ಪ್ರಕರಣದ ಮೇರೆಗೆ ಪರಿಭಾಷಿಸಲಾದಂತೆ ''ನೌಕರ'' ಎಂಬ ಪದದ ಅರ್ಥವ್ಯಾಪ್ತಿಯೊಳಗಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

> *2(ಇ) ''ಉದ್ಯೋಗದಾತ ಎಂಬುದು, ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ ಯಾವುದೇ ನಿಕಾಯವನ್ನು ಒಳಗೊಳ್ಳುತ್ತದೆ ಮತ್ತು ಉದ್ಯೋಗದಾತನ ಯಾವುವೇ ವ್ಯವಸ್ಥಾಪಕ ಏಜೆಂಟ್ ಮತ್ತು ಮೃತ ಉದ್ಯೋಗಿಯ ಕಾನೂನು ಸಮ್ಮತ ಪ್ರತಿನಿಧಿ, ಮತ್ತು ಕೆಲಸಗಾರನ ಸೇವೆಯನ್ನು ಯಾವ ವ್ಯಕ್ತಿಯೊಂದಿಗೆ ಕೆಲಸಗಾರನು ಸೇವೆಯು ಅಥವಾ ಉಮೇದುವಾರಿಕೆಯು ಒಪ್ಪಂದವನ್ನು ಮಾಡಿಕೊಂಡಿರುವನೋ ಆ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಗೆ ತಾತ್ಕಾಲಿಕವಾಗಿ ಎರವಲು ನೀಡಿದ್ದಾಗ ಅಥವಾ ಕೂಲಿಗೆ*

*ಗೊತ್ತುಪಡಿಸಿರುವಾಗ, ಎಂದರೆ ಕೆಲಸಗಾರನು ಅವನಿಗಾಗಿ ದುಡಿಯುತ್ತಿರುವಾಗ ಅಂಥ ಇತರ ವ್ಯಕ್ತಿ."*

16. ಮೇಲೆ ಚರ್ಚಿಸಲಾದಂತೆ, ಯಾವುದೇ ಚಟುವಟಿಕೆಗಳನ್ನು ನಡೆಸಲು ಟ್ರ್ಯಾಕ್ಟರ್ ಆಗಲಿ ಅಥವಾ ಟ್ರೇಲರ್‌ನಾಗಲಿ ಬಳಸಬಾರದು ಎಂಬುದು ಇದಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ***ದ ಬ್ರಾಂಚ್ ಮ್ಯಾನೇಜರ್, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿಮಿಟೆಡ್ -ವಿರುದ್ಧ- ಬೋರೇಗೌಡ ಮತ್ತು ಇತರರು*** ಮೇಲಿನ ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು, ಟ್ರ್ಯಾಕ್ಟರ್ ಮತ್ತು ಟ್ರೇಲರು ಬೇರೆ ಬೇರೆ ಮಾಲೀಕರಿಗೆ ಸೇರಬಹುದಾಗಿದ್ದು, ಬೇರೆ ಬೇರೆ ವಿಮಾ ಕಂಪನಿಗಳೊಂದಿಗೆ ವಿಮೆ ಮಾಡಿಸಬಹುದಾಗಿದ್ದು, ಅವುಗಳು ಒಟ್ಟಿಗೆ ಚಲಿಸುವಾಗ ಅಪಘಾತ ಸಂಭವಿಸಿ ಗಾಯಗಳುಂಟಾಗಿ ಅಥವಾ ಸಾವು ಸಂಭವಿಸಿದಾಗ, ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳೆರಡರ ಮಾಲೀಕರು ಮತ್ತು ವಿಮಾಗಾರರು ಸಮಾನವಾಗಿ ಕ್ಲೇಮಿಗೆ ಉತ್ತರ ನೀಡಲು ಹೊಣೆಗಾರರಾಗುವರು.

17. ಪ್ರಸ್ತುತ ಪ್ರಕರಣದಲ್ಲಿ ಕೂಡ, ಟ್ರ್ಯಾಕ್ಟರು ಸೋಮಶೇಖರ್ ಗೌಡ ಎಂಬೊಬ್ಬರಿಗೆ ಸೇರಿದ್ದು, ಟ್ರೇಲರು ಬಸಣ್ಣಗೌಡ ಎಂಬೊಬ್ಬರಿಗೆ ಸೇರಿತ್ತು. ಟ್ರ್ಯಾಕ್ಟರ್‌ಗೆ ಅಪೀಲುದಾರ-ಯುನೈಟೆಡ್ ಇಂಡಿಯಾ ಇನ್‌ಶುರೆನ್ಸ್ ಕಂಪನಿ ಲಿಮಿಟೆಡ್‌ನೊಂದಿಗೆ ವಿಮೆ ಮಾಡಿಸಲಾಗಿತ್ತು ಮತ್ತು ಟ್ರೇಲರ್‌ಗೆ ಎದುರುದಾರ ಸಂ.5-ನ್ಯಾಷನಲ್ ಇನ್‌ಶುರೆನ್ಸ್ ಕಂಪನಿ ಲಿಮಿಟೆಡ್‌ನೊಂದಿಗೆ ವಿಮೆಮಾಡಲಾಗಿತ್ತು. ಅವುಗಳನ್ನು ಸಾರ್ವಜನಿಕ ರಸ್ತೆಯಲ್ಲಿ ಒಟ್ಟಿಗೆ ಓಡಿಸುತ್ತಿದ್ದಾಗ, ಅಪಘಾತ ಸಂಭವಿಸಿದ್ದು, ಟ್ರ್ಯಾಕ್ಟರ್‌ನ ಮಾಲೀಕನ ಅಧೀನದಲ್ಲಿ ಉದ್ಯೋಗಿಯಾಗಿದ್ದು ಟ್ರೇಲರ್‌ನಲ್ಲಿ ಪ್ರಯಾಣಿಸುತ್ತಿದ್ದ ಮೃತರಿಗೆ ಗಾಯಗಳಾಗಿದ್ದವು. ದೂರಿನ ಒಳಾಂಶಗಳು, ರುದ್ರಗೌಡನ ಜಮೀನಿನಲ್ಲಿ ಕೂಲಿ ಕೆಲಸ ಮಾಡಲು ರುದ್ರಗೌಡನ ಟ್ರ್ಯಾಕ್ಟರ್‌ನಲ್ಲಿ ಇತರರೊಟ್ಟಿಗೆ ಮೃತನು ಪ್ರಯಾಣ ಮಾಡುತ್ತಿದ್ದನೆಂಬುದನ್ನು ಟ್ರ್ಯಾಕ್ಟರ್‌ನಲ್ಲಿ ಮೃತನು ಪ್ರಯಾಣಿಸುತ್ತಿದ್ದುದು ಬೇರೆ ಯಾರದೂ ಪ್ರಕರಣವಾಗಿಲ್ಲದಿರುವುದರಿಂದ ಅವಳು ಟ್ರ್ಯಾಕ್ಟರ್‌ನ ಮಾಲೀಕನ ಅಧೀನದಲ್ಲಿ ನೌಕರಳಾಗಿದ್ದಳು ಎಂದರೆ ಸೋಮಶೇಖರ ಗೌಡನಾದ ಇವನು ಸದರಿ ರುದ್ರಗೌಡನ ಮಗನಲ್ಲದೆ ಬೇರಾರು ಅಲ್ಲ, ಎಂಬುದನ್ನು

ತಿಳಿಸುತ್ತದೆ. ಹಾಗೆಯೇ ಮೃತ ಮತ್ತು ಟ್ರೇಲರ್‌ನ ಮಾಲೀಕರ ನಡುವೆ ನೌಕರಿದಾತ ಮತ್ತು ನೌಕರನಿಗೆ ಸಂಬಂಧವಿರಲಿಲ್ಲವೆನ್ನುವ ಟ್ರೇಲರ್‌ನ ವಿಮಾಗಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದದಲ್ಲಿ ಯಾವುದೇ ಸತ್ವವಿರುವುದಿಲ್ಲ. ಬಸಣ್ಣಗೌಡರಿಗೆ ಸೇರಿದ್ದ ಟ್ರೇಲರನ್ನು, ಸೋಮಶೇಖರ್ ಗೌಡರಿಗೆ ಸೇರಿದ ಟ್ರ್ಯಾಕ್ಟರ್‌ನೊಂದಿಗೆ ಬಳಸಲು ಅನುಮತಿ ನೀಡಿದ್ದರಿಂದ ಮೃತ ಮತ್ತು ಟ್ರೇಲರ್‌ನ ಮಾಲೀಕರ ನಡುವೆ ನೌಕರ ಮತ್ತು ನೌಕರಿದಾತನ ಭಾವಿತ ಸಂಬಂಧವಿರುತ್ತದೆಯೆಂದು ಮೃತ ಮತ್ತು ಟ್ರ್ಯಾಕ್ಟರ್‌ನ ಮಾಲೀಕನ ನಡುವಿನ ಸಂಬಂಧವನ್ನು ಊಹೆ ಮಾಡಬೇಕಾಗಿದೆ. ಹೀಗಾಗಿ ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳೆರಡರ ಮಾಲೀಕರು ಮತ್ತು ವಿಮೆಗಾರರು ಪ್ರತಿಯೊಬ್ಬರೂ ಸಮಾನವಾಗಿ ಶೇಕಡಾ 50ರ ದರದಲ್ಲಿ ನಷ್ಟಪರಿಹಾರ ಸಂದಾಯ ಮಾಡಲು ಜವಾಬ್ದಾರರಾಗುವರು. ರೂಪಿಸಲಾದ ಕಾನೂನಿನ ಗಣನೀಯ ಪ್ರಶ್ನೆಗಳಿಗೆ ತದನುಸಾರವಾಗಿ ಉತ್ತರ ನೀಡಲಾಗಿದೆ.

18. ಟ್ರೇಲರ್‌ನ ವಿಮಾಗಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಅಪೀಲನ್ನು ಸಲ್ಲಿಸುವಾಗ ಟ್ರೇಲರನ ವಿಮಾಗಾರನನ್ನು ಪಕ್ಷಕಾರನನ್ನಾಗಿ ಮಾಡಿಲ್ಲದಿರುವುದರಿಂದ ಮತ್ತು 2014ನೇ ವರ್ಷದಲ್ಲಿ ಅವರನ್ನು ಕಕ್ಷಿಗಾರರಾಗಿ ಸೇರಿಸಿರುವುದರಿಂದ, ಅವರು, ಅವರನ್ನು ದಾವೆ ಹೂಡಿದ ದಿನಾಂಕದಿಂದ ನೀಡಿದ ನಷ್ಟಪರಿಹಾರ ಮೊತ್ತದ ಮೇಲಿನ ಬಡ್ಡಿಯನ್ನು ಸಂದಾಯ ಮಾಡಲು ಜವಾಬ್ದಾರರನ್ನಾಗಿ ಮಾಡಬಹುದು. ಟ್ರೇಲರ್‌ನ ವಿಮಾಗಾರನನ್ನು, ಆಯುಕ್ತರ ಮುಂದೆಯೇ ಕ್ಲೇಮು ಅರ್ಜಿಯಲ್ಲಿ ಪಕ್ಷಕಾರನಾಗಿ ಹೆಸರು ಸೇರಿಸಲಾಗಿದೆಯೆಂಬುದನ್ನು ಗಮನಿಸಬೇಕಾಗಿದೆ. ಆದುದರಿಂದ, ಟ್ರೇಲರ್‌ನ ವಿಮಾದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದದಲ್ಲಿ ಯಾವುದೇ ತಿರುಳಿರುವುದಿಲ್ಲ. ಆದುದರಿಂದ ಈ ಮುಂದಿನ ಆದೇಶ:

## ಆದೇಶ

ಅಪೀಲನ್ನು ಭಾಗಶಃವಾಗಿ ಪುರಸ್ಕರಿಸಲಾಗಿದೆ. ಆಯುಕ್ತರು ಹೊರಡಿಸಿದ ತೀರ್ಪು ಮತ್ತು ಐತೀರ್ಪನ್ನು, ಹೊಣೆಗಾರಿಕೆಗೆ ಸಂಬಂಧಪಡುವಷ್ಟರಮಟ್ಟಿಗೆ

ಮಾರ್ಪಾಡು ಮಾಡಲಾಗಿದೆ. ಟ್ರ್ಯಾಕ್ಟರ್ ಮತ್ತು ಟ್ರೇಲರ್‌ಗಳೆರಡರ ಮಾಲೀಕರು ಮತ್ತು ವಿಮಾಗಾರರು ಪ್ರತ್ಯೇಕವಾಗಿ, ಪ್ರತಿಯೊಬ್ಬರೂ 50% ದರದಲ್ಲಿ ಸಮಾನವಾಗಿ ನಷ್ಟಪರಿಹಾರವನ್ನು ಸಂದಾಯಮಾಡಲು ಜವಾಬ್ದಾರರಾಗಿರುವರು.

ಟ್ರಾಕ್ಟರ್‌ನ ಅಪೀಲುದಾರ–ವಿಮಾಗಾರ ಮತ್ತು ಟ್ರೇಲರ್‌ನ ಎದುರುದಾರ ಸಂ.5–ವಿಮಾಗಾರನಿಗೆ, ಅಪಘಾತವಾದ ತರುವಾಯ 30 ದಿನಗಳಿಂದ ಸಂದಾಯಮಾಡುವ ದಿನಾಂಕದವರೆಗೆ ಪ್ರತೀ ವರ್ಷಕ್ಕೆ 12% ದರದಲ್ಲಿ ಬಡ್ಡಿಯೊಂದಿಗೆ ಪ್ರತಿಯೊಬ್ಬರೂ 50% ದರದಲ್ಲಿ ಸಮಾನವಾಗಿ ಕ್ಲೇಮುದಾರರಿಗೆ ಆಯುಕ್ತರು ನೀಡಿದ ನಷ್ಟಪರಿಹಾರವನ್ನು ಸಂದಾಯ ಮಾಡಲು ಈ ಮೂಲಕ ಸೂಚಿಸಲಾಗಿದೆ.

ಠೇವಣಿಯಲ್ಲಿಡಲಾದ ಮೊತ್ತವನ್ನು, ಆಯುಕ್ತರ ಐತೀರ್ಪಿನ ನಿಬಂಧನೆಗಳಂತೆ ಕ್ಲೇಮುದಾರರ ಹೆಸರಿಗೆ ಬಟವಾಡೆ ಮಾಡುವುದಕ್ಕಾಗಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ, ರಾಯಚೂರು ಇವರಿಗೆ ಕಳುಹಿಸಲು ಆದೇಶಿಸಲಾಗಿದೆ.

ವೆಚ್ಚಗಳ ಸಂಬಂಧದಲ್ಲಿ ಯಾವುದೇ ಆದೇಶವಿರುವುದಿಲ್ಲ.